ಕಲಾವಿದ, ಹಣ್ಣು ಮಾರುವ ಕರಿಯರು, ಕುಸ್ತಿ ಪೈಲ್ವಾನರು ಮುಂತಾಗಿ. ಅವುಗಳಲ್ಲಿ ಹುಲ್ಲು ರೋಗಿ ಯಾತ್ರಾರ್ಥಿ ಎಂಬ ತರತಮವಿಲ್ಲದೆ ಹೊತ್ತು ಸಾಗಿಸುತ್ತಿರುವ ರಾಸಭಗಳೂ ಇದ್ದವು. ನಾವು ಮ್ಯೂಸಿಯಮ್ನಲ್ಲಿ ಕಂಡ ಒಂದೇ ಚಿತ್ರದಲ್ಲಾದರೂ ಅವು ವಿಶ್ರಾಂತ ಭಂಗಿಯಲ್ಲಿ ಕೂತಿಲ್ಲ, ಮಲಗಿಲ್ಲ. ಖರ್ಜೂರ, ದ್ರಾಕ್ಷಿ, ಆಲಿವ್ ಹಣ್ಣುಗಳನ್ನು ತೋಟದಿಂದ ಮನೆಗೆ ಸಾಗಿಸುತ್ತ ಕಾಯಕಮಗ್ನವಾಗಿವೆ. ನಮ್ಮೂರಲ್ಲೂ ತೋಟ ತುಡಿಕೆ ಇದ್ದವರು ಅಡಕೆಕಾಯನ್ನು ಕತ್ತೆಗಳ ಮೇಲೆ ಸಾಗಿಸುತ್ತಿದ್ದರು; ವ್ಯಾಪಾರಿಗಳು ಸರಕು ಹೇರಿಕೊಂಡು ಬರುತ್ತಿದ್ದರು. ಕಂಬಳಿ, ಗೊಬ್ಬರ, ಚೌಳು, ಇಟ್ಟಿಗೆ, ಉಸುಕು, ಕಟ್ಟಿಗೆ–ಆಡುಮುಟ್ಟದ ಸೊಪ್ಪಿಲ್ಲ, ಕತ್ತೆ ಹೊರದ ವಸ್ತುವಿಲ್ಲ. ಲೋಕಪೋಷಣೆಯ ವಜನು ಹೊತ್ತ ಕತ್ತೆ, ಹರ್ಕ್ಯೂಲಿಸನಿಗಿಂತ ಯಾತರಲ್ಲೂ ಕಮ್ಮಿಯಲ್ಲ.

ಮರುಭೂಮಿಯ ಸುಡುಬಿಸಿಲು ಮತ್ತು ಪದಕುಸಿವ ಮರಳಲ್ಲಿ, ಸೀಳುಪಾದದ ಹಸು ಎಮ್ಮೆಗಳು ಚಣಕಾಲ ಬದುಕಲಾರವು. ಒಂಟೆ, ಕತ್ತೆ, ಕುದುರೆಗಳು ಮಾತ್ರ, ನೀರೊಳಗಿನ ಮೀನಂತೆ ಬಾನೊಳಗಿನ ಹಕ್ಕಿಯಂತೆ ಚಲಿಸಬಲ್ಲವು. ಇದು ಮರುಭೂಮಿಯ ಸುಡುಸತ್ಯ. ಪ್ರಾಣಿಗಣತಿಯ ಪ್ರಕಾರ ಭಾರತದಲ್ಲಿ ಎರಡು ಕೋಟಿ ಕತ್ತೆಗಳಿವೆಯಂತೆ. ಅತಿ ಹೆಚ್ಚಿರುವುದು ರಾಜಸ್ಥಾನದಲ್ಲಂತೆ. ದೇಶದ ಏಳಿಗೆಗೆ ಇಷ್ಟು ಸಾಕಲ್ಲವೇ? ಮರುಭೂಮಿಯ ಶಿಲ್ಪ, ಚಿತ್ರ, ಸಾಹಿತ್ಯ, ಪುರಾಣ, ಚರಿತ್ರೆಗಳಲ್ಲಂತೂ ಇವು ಸರ್ವಾಂತರ್ಯಾಮಿ; ಖರ್ಜೂರವೃಕ್ಷ ಓಯಸಿಸ್‌ಗಳಿಗಿಂತ ಮಿಗಿಲಾದ ಸ್ಥಾನ ಅವಕ್ಕೆ. ಮುಲ್ಲಾ ನಸರುದ್ದೀನನ ಕತೆಗಳಲ್ಲಿ ಇವೇ ಪಾತ್ರಧಾರಿಗಳು. ಒಮ್ಮೆ ಮುಲ್ಲಾನ ಬಳಿ ಅವನ ಗೆಳೆಯ ಬಂದು, ಸಂತೆಗೆ ಹೋಗಿ ಬರಲು ಕತ್ತೆಯನ್ನು ಕಡವಾಗಿ ಕೇಳುತ್ತಾನೆ. ಮುಲ್ಲಾ ಕಡ್ಡಿ ಮುರಿದಂತೆ, 'ಮನೆಯಲ್ಲಿ ಕತ್ತೆಯಿಲ್ಲ' ಎನ್ನುತ್ತಾನೆ. ಲಾಯದಲ್ಲಿ ಕಿವಿ ನಿಮಿರಿಸಿಕೊಂಡು ಕೂತಿದ್ದ ಕತ್ತೆಗೆ ಸಂಭಾಷಣೆ ಸಾಂಗವಾಗಿ ಮುಟ್ಟಿತು. ಧಣಿಯನ್ನು ಇಕ್ಕಟ್ಟಿಗಿಟ್ಟು ತಮಾಷೆ ನೋಡಬೇಕೆನಿಸಿ ಅದು ಹೊಂಯ್ಕರಿಸಿತು. ಉಮೇದಿನಲ್ಲಿ ಗೆಳೆಯ, "ಅಗೋ ಮುಲ್ಲಾ, ಕತ್ತೆ ಇದೆ" ಎಂದು ಉದ್ಗರಿಸುತ್ತಾನೆ. ಆಗ ಮುಲ್ಲಾ ತಣ್ಣಗೆ ಕೇಳುತ್ತಾನೆ: "ನೀನು ಯಾರ ಮಾತನ್ನು ನಂಬುತ್ತೀ? ಕತ್ತೆಯದೊ ಆಪ್ತಮಿತ್ರನದೊ?" ಇದು ಯಕ್ಷಪ್ರಶ್ನೆ. ಮಿತ್ರವಾಕ್ಯ ನಂಬಿದರೆ ಕತ್ತೆ ಇಲ್ಲವೆಂದು ಒಪ್ಪಿಕೊಳ್ಳಬೇಕು. ಕತ್ತೆ ಮಾತನ್ನು ನಂಬುತ್ತೇನೆಂದರೆ ಮಿತ್ರನನ್ನು ಕಳೆದುಕೊಳ್ಳಬೇಕು. ಯಾವ ಜವಾಬಿನಿಂದಲೂ ಕತ್ತೆ

